ರಾಜ್ಯದ ಕೆರೆಗಳ ಹೂಳೆತ್ತುವುದು.

2453 (2870) :— ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹೂಳೆತ್ತಬೇಕಾಗಿರುವ ಕೆರೆಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಕೆರೆಗಳ ಹೂಳನ್ನು ಸಾಮೂಹಿಕ ಕ್ರಮದಿಂದ ಯಾವಾಗ ತೆಗೆಯಲಾಗುವುದು. ಈ ಕೆರೆಗಳಲ್ಲಿ ಶೇಖರಣೆಯಾಗಿರುವ ದೂಳಿನ ಪ್ರಮಾಣ ಎಷ್ಟು? ಇದರಿಂದ ಪೋಲಾಗುತ್ತಿರುವ ನೀರಿನ ಪ್ರಮಾಣ ಎಷ್ಟು?

ಇ) ಇದರಿಂದ ಎಷ್ಟು ಎಕರೆ ಕೆರೆ ನೀರಾವರಿ ಪ್ರದೇಶ ಕಡಿಮೆಯಾಗಿದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಸಣ್ಣ ನೀರಾವರಿ ವ್ಯಾಪ್ತಿಯಲ್ಲಿರುವ 3322 ಕೆರೆಗಳ ಬಹುತೇಕ ಎಲ್ಲಾ ಕೆರೆಗಳಲ್ಲಿ ವಿವಿಧ ಪ್ರಮಾಣದಲ್ಲಿ ದೂಳು ತುಂಬಿರುತ್ತದೆ.

ಆ) ರೈತರ ಸಹಭಾಗಿತ್ವದಲ್ಲಿ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು 1998-99ನೇ ಸಾಲಿನಿಂದ ಆಯವ್ಯಯದಲ್ಲಿ ಒದಗಿಸಿರುವ ಅನುದಾನಕ್ಕೆ ಅನುಗುಣವಾಗಿ ಕೈಗೊಳ್ಳಲಾಗುತ್ತಿದೆ. ಈ ಕೆರೆಗಳಲ್ಲಿ ನೀರು ಶೇಖರಣಾ ಸಾಮರ್ಥ್ಯದ ಶೇಕಡಾ 20 ರಿಂದ 40 ರಷ್ಟು ಪ್ರಮಾಣದಲ್ಲಿ ದೂಳು ತುಂಬಿದ್ದು ಈ ಪ್ರಮಾಣದ ನೀರಿನ ಶೇಖರಣಾ ಸಾಮರ್ಥ್ಯ ಕಡಿಮೆ ಆಗಿರುತ್ತದೆ. ಇದರಿಂದಾಗಿ ಈ ಕೆರೆಗಳ ಒಟ್ಟಾರೆ ಆಚ್ಚುಕಟ್ಟಿಗೆ ಶೇ. 20 ರಿಂದ 40 ರಷ್ಟು ವಿಸ್ತೀರ್ಣ ನೀರಾವರಿ ಪ್ರದೇಶ ಕಡಿಮೆಯಾಗಿದೆ.

ರಾಜ್ಯದಲ್ಲಿ ಶಿಶುಗಳ ಮಾರಾಟ

2454 (2914) ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹೆಚ್ಚಾಗಿ ಶಿಶುಗಳು ಮಾರಾಟವಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಕಳೆದ ಒಂದು ವರ್ಷದಲ್ಲಿ ಎಷ್ಟು ಶಿಶುಗಳ ಮಾರಾಟ ಪ್ರಕರಣ ಪತ್ತೆ ಹಚ್ಚಲಾಗಿದೆ. (ಜಿಲ್ಲಾವಾರು ವಿವರ ನೀಡುವುದು);

ಇ) ಮಾರಾಟವಾದ ಶಿಶುಗಳಲ್ಲಿ ಗಂಡು ಹಾಗೂ ಶಿಶುಗಳ ಸಂಖ್ಯೆ ಎಷ್ಟು?

ಈ) ಇದನ್ನು ತಡೆಗಟ್ಟಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಇಲ್ಲ

ಆ) ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಶಿಶುಗಳ ಮಾರಾಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು ಎರಡು ಪ್ರಕರಣಗಳು ಪತ್ತೆಹಚ್ಚಲಾಗಿದೆ. ಅವುಗಳಲ್ಲಿ ಗುಲ್ಬರ್ಗಾ ಜಿಲ್ಲೆಯ ಕೊಂಜಾವರಂ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣಗಳು ದಾಖಲಾಗಿದ್ದು, ಗುನ್ನೆ ಸಂಖ್ಯೆ : 10:2001 ಮತ್ತು ಮೊಕದ್ದಮೆ ಸಂಖ್ಯೆ : 17:2001 ದಿನಾಂಕ: 28-3-2001 ರಂದು ಕೇಸನ್ನು ದಾಖಲಿಸಿ ಅನಂತರ ಸಿಓಡಿ ತನಿಖೆಯನ್ನು ನಡೆಸಿದ್ದು, ಒಟ್ಟು 11 ಜನರ ಮೇಲೆ ದೋಷಾರೊಪಣ ಪಟ್ಟಿಯನ್ನು ದಿನಾಂಕ: 23-6-2001 ರಂದು ಚಿಂಚೋಳಿಯ ಜೆ.ಎಂ.ಎಫ್.ಸಿ.ಯಲ್ಲಿ ಸಲ್ಲಿಸಿದ್ದು, ಅವುಗಳನ್ನು ನ್ಯಾಯಲಯವು ಸಿ.ಸಿ. ನಂ. 272:2001 ಹಾಗೂ 273:2001ರಲ್ಲಿ ದಾಖಲಿಸಿಕೊಂಡಿದೆ.

ಗುಲ್ಬರ್ಗಾ ಜಿಲ್ಲೆ ಹೊರತುಪಡಿಸಿ ಇನ್ನುಳಿದ ಯಾವುದೇ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ವರದಿಯಾಗಿರುವುದಿಲ್ಲ.

ಇ) ಇಲ್ಲಿಯವರೆಗೆ ನಡೆದ ತನಿಖೆಯಿಂದ ಒಟ್ಟು 17 ಹೆಣ್ಣು ಶಿಶುಗಳ ಮಾರಾಟವಾಗಿದೆ ಎಂದು ತಿಳಿದು ಬಂದಿರುತ್ತದೆ.

ಈ) ಇಂತಹ ಪ್ರಕರಣಗಳು ಜರುಗದಂತೆ ಎಲ್ಲಾ ಘಟಕಾಧಿಕಾರಿಗಳಿಗೆ ಸೂಚನೆಗಳನ್ನು ನೀಡಿದ್ದು, ಇಂತಹ ಘಟನೆಗಳು ಸಂಭವಿಸಿದಲ್ಲಿ ಸೂಕ್ತ ಕಾನೂನು ರೀತಿ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ದೇವಸ್ಥಾನಗಳಿಗೆ ಹಣ ಮಂಜೂರಾತಿ

2457 (2898) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಕೊತ್ತನೂರು ಗ್ರಾಮದ ಶ್ರೀ ಈಶ್ವರ ದೇವಾಲಯದ ದುರಸ್ತಿ ಕಾರ್ಯಕ್ಕೆ ಹಣ ಮಂಜೂರು ಮಾಡುವಂತೆ ಮಾನ್ಯ ಮುಜರಾಯಿ ಸಚಿವರು ಆದೇಶ ನೀಡಿದ್ದರೂ ಹಣ ಮಂಜೂರಾಗದಿರಲು ಕಾರಣವೇನು?